# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 569 (656)**

**ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 11.12.2023**

**ಉತ್ತರಿಸಬೇಕಾದ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಸೃಜಿಸಲಾಗಿರುವ ಹುದ್ದೆಗಳೆಷ್ಟು; ಇವುಗಳಲ್ಲಿ ಭರ್ತಿ ಮಾಡಲಾಗಿರುವ ಹುದ್ದೆಗಳೆಷ್ಟು; ಖಾಲಿಯಿರುವ ಹುದ್ದೆಗಳೆಷ್ಟು; ಖಾಲಿ ಹುದ್ದೆಗಳ ಭರ್ತಿಗೆ ಇಲಾಖೆ ಕೈಗೊಂಡ ಕ್ರಮಗಳೇನು; ಶಿಕ್ಷಕರ ಕೊರತೆಯಿಂದ ಮುಚ್ಚಲಾದ ಶಾಲೆಗಳೆಷ್ಟು; (ತಾಲ್ಲೂಕುವಾರು ನೀಡುವುದು)</td><td>
<table>
<tr><th>ವಿವರ</th><th>ಸರ್ಕಾರಿ ಪ್ರಾಥಮಿಕ ಶಾಲಾ ವಿಭಾಗ</th><th>ಸರ್ಕಾರಿ ಪ್ರೌಢ ಶಾಲಾ ವಿಭಾಗ</th></tr>
<tr><td>ಸೃಜಿಸಲಾಗಿರುವ ಹುದ್ದೆಗಳ ಸಂಖ್ಯೆ</td><td>188531</td><td>44341</td></tr>
<tr><td>ಭರ್ತಿ ಮಾಡಲಾಗಿರುವ (ಕಾರ್ಯನಿರತ) ಹುದ್ದೆಗಳ ಸಂಖ್ಯೆ</td><td>148501</td><td>34186</td></tr>
<tr><td>ಖಾಲಿಯಿರುವ ಹುದ್ದೆಗಳ ಸಂಖ್ಯೆ</td><td>40030</td><td>10155</td></tr>
</table>
(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ)
<ul>
<li>15000 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅಧಿಸೂಚಿಸಲಾಗಿದ್ದು, ಈ ಪೈಕಿ 13352 ಜನ ಶಿಕ್ಷಕರು ಆಯ್ಕೆಯಾಗಿರುತ್ತಾರೆ. ಇದರಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣ ಹೊರತುಪಡಿಸಿ 12269 ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗಿದೆ.</li>
<li>ಪ್ರಸ್ತುತ ಸಾಲಿನಲ್ಲಿ 35192 ಅತಿಥಿ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಿಗೆ ನೇಮಸಿಕೊಳ್ಳಲಾಗಿರುತ್ತದೆ. ಹಾಗೂ ಪ್ರೌಢಶಾಲಾ ಶಿಕ್ಷಕರ ಖಾಲಿ ಹುದ್ದೆಗಳಿಗೆ ಎದುರಾಗಿ ಕಲ್ಯಾಣ ಕರ್ನಾಟಕ ಪ್ರದೇಶದ ಪ್ರೌಢಶಾಲೆಗಳು ಸೇರಿದಂತೆ ಒಟ್ಟು 7818 ಅತಿಥಿ ಶಿಕ್ಷಕರನ್ನು ಪ್ರೌಢಶಾಲೆಗಳಿಗೆ ನೇಮಕಾತಿ ಮಾಡಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ.</li>
<li>ಶಿಕ್ಷಕರ ಕೊರತೆಯಿಂದ ಯಾವುದೇ ಶಾಲೆಗಳನ್ನು ಮುಚ್ಚಿರುವುದಿಲ್ಲ.</li>
</ul>
</td></tr>
<tr><td>ಆ)</td><td>ರಾಜ್ಯದಲ್ಲಿ ಶಿಕ್ಷಣ ಇಲಾಖೆಯ ಬೇರೆ ಬೇರೆ ಶಿಕ್ಷಕೇತರ ಹುದ್ದೆಯಲ್ಲಿ ಹಾಗೂ ಇತರೆ ಇಲಾಖೆಯ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಶಾಲೆಗಳ ಶಿಕ್ಷಕರುಗಳೆಷ್ಟು; ನಿಯೋಜನೆಗೆ ಇರುವ</td><td>ಶಿಕ್ಷಣ ಇಲಾಖೆಯ ಬೇರೆ ಬೇರೆ ಶಿಕ್ಷಕೇತರ ಹುದ್ದೆಯಲ್ಲಿ ಹಾಗೂ ಇತರೆ ಇಲಾಖೆಯ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳು :<br><br>ಸರ್ಕಾರಿ ಪ್ರಾಥಮಿಕ ವಿಭಾಗ:- 02<br>ಸರ್ಕಾರಿ ಪ್ರೌಢಶಾಲಾ ವಿಭಾಗ:- 04</td></tr>
</table>

| | | |
|---|---|---|
| | ಮಾನದಂಡಗಳೇನು; ನಿಯೋಜನೆಗೆ ಗರಿಷ್ಠ ಅವಧಿ ಎಷ್ಟು; (ವಿವರ ನೀಡುವುದು) | ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 50(3)ರಲ್ಲಿ ಹಾಗೂ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 16(a) (ii)ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿ ಸಮಾನಾಂತರ 'ಹುದ್ದೆಗೆ ನಿಯೋಜನೆ ಮೇಲೆ ತೆರಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಸರ್ಕಾರದ ವಿಶೇಷ ಆದೇಶಗಳಿರದ ಹೊರತು ಸಾಮಾನ್ಯವಾಗಿ ನಿಯೋಜನೆಯ ಅವಧಿಯನ್ನು ಐದು ವರ್ಷಗಳಿಗಿಂತ ಹೆಚ್ಚಿಗೆ ವಿಸ್ತರಿಸದಿರುವಂತೆ ಸೂಚಿಸಲಾಗಿದೆ. |
| ಇ) | ರಾಜ್ಯದ ಹಲವು ಜಿಲ್ಲೆಗಳಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಕರುಗಳು 3 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಶಿಕ್ಷಕೇತರ ಹುದ್ದೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು; ಶೈಕ್ಷಣಿಕ ಬ್ಲಾಕ್‌ವಾರು ಸಂಪೂರ್ಣ ಮಾಹಿತಿ ನೀಡುವುದು; | ಬಂದಿದೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 139 ಪಿಬಿಎಸ್ 2014 ದಿನಾಂಕ:24/02/2014 ರಂದು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು, ಉಪನ್ಯಾಸಕರು ಮತ್ತು ಪ್ರಾಂಶುಪಾಲರುಗಳನ್ನು ಬೋಧಕೇತರ ಕಾರ್ಯಗಳಿಗೆ ನಿಯೋಜಿಸುವುದನ್ನು ರದ್ದುಗೊಳಿಸಿದೆ. |
| ಈ) | ರಾಜ್ಯದ ಹಲವು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ಶಿಕ್ಷಕರ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗಿದ್ದು, ಶಿಕ್ಷಕೇತರ ಹುದ್ದೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ ನಿಯೋಜನೆ ರದ್ದುಪಡಿಸಿ, ಶೈಕ್ಷಣಿಕ ಚಟುವಟಿಕೆಗಳಿಗೆ ಬಳಸಲು ಈವರೆಗೆ ಸರ್ಕಾರ ಕೈಗೊಂಡ ಕ್ರಮವೇನು? (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ 06 ಶಿಕ್ಷಕರನ್ನು ಮಾತ್ರ ಬೋಧಕೇತರ ಹುದ್ದೆಗಳಲ್ಲಿ ನಿಯೋಜಿಸಲಾಗಿದ್ದು, ವಿವರವನ್ನು **ಅನುಬಂಧ-3 ರಲ್ಲಿ** ಒದಗಿಸಿದೆ. ಸದರಿಯವರ ನಿಯೋಜನೆಯನ್ನು ಹಿಂಪಡೆಯಲು ಕ್ರಮವಹಿಸಲಾಗುವುದು. |

**ಸಂಖ್ಯೆ: ಇಪಿ 56 ಪಿಎಂಎ 2023.**

**(ಎಸ್. ಮಧು ಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

ಅನುಬಂಧ - I

| Sanctioned Post for Govt Primary School & Working Strenth & Vacant Post Details | | | | |
|---|---|---|---|---|
| | DISTRICT | Sactioned | Working | Vacant |
| 1 | BELGAUM(2901) | 7740 | 6011 | 1729 |
| 2 | BAGALKOT(2902) | 7487 | 6016 | 1471 |
| 3 | VIJAYAPURA(2903) | 9807 | 8116 | 1691 |
| 4 | KALBARGA(2904) | 9873 | 7629 | 2244 |
| 5 | BIDAR(2905) | 6027 | 5315 | 712 |
| 6 | RAICHUR(2906) | 8160 | 4397 | 3763 |
| 7 | KOPPAL(2907) | 6065 | 3857 | 2208 |
| 8 | GADAG(2908) | 3805 | 3034 | 771 |
| 9 | DHARWAD(2909) | 5046 | 4113 | 933 |
| 10 | UTTARA KANNADA(2910) | 3072 | 2694 | 378 |
| 11 | HAVERI(2911) | 6153 | 4954 | 1199 |
| 12 | BELLARY(2912) | 4241 | 2638 | 1603 |
| 13 | CHITRADURGA(2913) | 6299 | 5558 | 741 |
| 14 | DAVANAGERE(2914) | 5981 | 5363 | 618 |
| 15 | SHIMOGA(2915) | 6572 | 5701 | 871 |
| 16 | UDUPI(2916) | 2425 | 2046 | 379 |
| 17 | CHIKKAMANGALORE(2917) | 4494 | 3900 | 594 |
| 18 | TUMKUR(2918) | 6043 | 5298 | 745 |
| 19 | KOLAR(2919) | 5328 | 4674 | 654 |
| 20 | BANGALORE U SOUTH(2920) | 4384 | 3270 | 1114 |
| 21 | BANGALORE RURAL(2921) | 3309 | 2757 | 552 |
| 22 | MANDYA(2922) | 5244 | 4274 | 970 |
| 23 | HASSAN(2923) | 6623 | 5767 | 856 |
| 24 | DAKSHINA KANNADA(2924) | 4447 | 3287 | 1160 |
| 25 | KODAGU(2925) | 1573 | 1287 | 286 |
| 26 | MYSORE(2926) | 7566 | 6419 | 1147 |
| 27 | CHAMARAJANAGARA(2927) | 3090 | 2466 | 624 |
| 28 | BANGALORE U NORTH(2928) | 2624 | 2124 | 500 |
| 29 | CHIKKABALLAPURA(2929) | 4403 | 3737 | 666 |
| 30 | BELGAUM CHIKKODI(2930) | 9478 | 6839 | 2639 |
| 31 | TUMKUR MADHUGIRI(2931) | 4067 | 3324 | 743 |
| 32 | RAMANAGARA(2932) | 3652 | 2657 | 995 |
| 33 | YADAGIRI(2933) | 5518 | 2873 | 2645 |
| 34 | UTTARA KANNADA SIRSI(2934) | 3787 | 3084 | 703 |
| 35 | VIJAYANAGRA (2935) | 4148 | 3022 | 1126 |
| | TOTAL | 188531 | 148501 | 40030 |

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಅನುಬಂಧ - II

ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಂಜೂರಾದ, ಕಾರ್ಯನಿರತ, ಹಾಗೂ ಖಾಲಿ ಹುದ್ದೆಗಳ ಜಿಲ್ಲಾವಾರು ಮಾಹಿತಿ.

| ಕ್ರ. ಸಂ | ಜಿಲ್ಲೆಯ ಹೆಸರು | ಮಂಜೂರಾದ ಹುದ್ದೆಗಳು | ಕಾರ್ಯನಿರತ ಹುದ್ದೆಗಳು | ಖಾಲಿ ಹುದ್ದೆಗಳು |
|---|---|---|---|---|
| 1 | BAGALKOT(2902) | 1800 | 1516 | 284 |
| 2 | BALLARI(2912) | 1086 | 690 | 396 |
| 3 | BELAGAVI CHIKKODI(2930) | 1919 | 1378 | 541 |
| 4 | BELAGAVI(2901) | 1287 | 975 | 312 |
| 5 | BENGALURU RURAL(2921) | 657 | 489 | 168 |
| 6 | BENGALURU U NORTH(2928) | 681 | 612 | 69 |
| 7 | BENGALURU U SOUTH(2920) | 992 | 815 | 177 |
| 8 | BIDAR(2905) | 1520 | 1190 | 330 |
| 9 | CHAMARAJANAGARA(2927) | 730 | 534 | 196 |
| 10 | CHIKKABALLAPURA(2929) | 970 | 708 | 262 |
| 11 | CHIKKAMANGALURU(2917) | 1051 | 850 | 201 |
| 12 | CHITRADURGA(2913) | 1031 | 890 | 141 |
| 13 | DAKSHINA KANNADA(2924) | 1410 | 1092 | 318 |
| 14 | DAVANAGERE(2914) | 1285 | 1165 | 120 |
| 15 | DHARWAD(2909) | 1006 | 861 | 145 |
| 16 | GADAG(2908) | 975 | 741 | 234 |
| 17 | HASSAN(2923) | 1999 | 1504 | 495 |
| 18 | HAVERI(2911) | 1270 | 981 | 289 |
| 19 | KALBURGI(2904) | 2507 | 2057 | 450 |
| 20 | KODAGU(2925) | 370 | 263 | 107 |
| 21 | KOLAR(2919) | 1166 | 817 | 349 |
| 22 | KOPPAL(2907) | 1623 | 1134 | 489 |
| 23 | MANDYA(2922) | 1783 | 1319 | 464 |
| 24 | MYSURU(2926) | 2076 | 1799 | 277 |
| 25 | RAICHUR(2906) | 2239 | 1413 | 826 |
| 26 | RAMANAGARA(2932) | 888 | 684 | 204 |
| 27 | SHIVAMOGGA(2915) | 1542 | 1331 | 211 |
| 28 | TUMAKURU MADHUGIRI(2931) | 864 | 641 | 223 |
| 29 | TUMAKURU(2918) | 1245 | 972 | 273 |
| 30 | UDUPI(2916) | 1053 | 861 | 192 |
| 31 | UTTARA KANNADA SIRSI(2934) | 696 | 551 | 145 |
| 32 | UTTARA KANNADA(2910) | 416 | 385 | 31 |
| 33 | VIJAYANAGARA(2935) | 1270 | 927 | 343 |
| 34 | VIJAYAPURA(2903) | 1499 | 1267 | 232 |
| 35 | YADAGIRI(2933) | 1435 | 774 | 661 |
| | **Total** | **44341** | **34186** | **10155** |

ನಿರ್ದೇಶಕರು(ಪ್ರೌಢ ಶಿಕ್ಷಣ)

# ಅನುಬಂಧ - 3

| ಕ್ರ. ಸಂ. | ಅನ್ಯ ಇಲಾಖೆಗೆ ನಿಯೋಜನೆಗೊಂಡಿರುವ ಶಿಕ್ಷಕರ ಹೆಸರು ಮತ್ತು ಮೂಲ ಹುದ್ದೆಯ ವಿಳಾಸ | ನಿಯೋಜನೆ ಮಾಡಲಾಗಿರುವ ಇಲಾಖೆ ಹಾಗೂ ಹುದ್ದೆಯ ಪದನಾಮ | ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಹುದ್ದೆ ಬೋಧಕ ಅಥವಾ ಬೋಧಕೇತರ |
|---|---|---|---|
| 1. | ಶ್ರೀಮತಿ ಅಂಬಿಕಾ, ಸಹ ಶಿಕ್ಷಕರು (ಹಿಂದಿ), ಸ.ಪ್ರೌ. ಶಾಲೆ, ತೋಕಸಂದ್ರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ | ಹಿಂದಿ ಭಾಷಾಂತರಕಾರ್ತಿ, ಭಾಷಾ ನಿರ್ದೇಶನಾಲಯ, ನೆಲಮಹಡಿ, ಡಾ\|\| ಅಂಬೇಡ್ಕರ್ ವೀಧಿ, ಬೆಂಗಳೂರು | ಬೋಧಕೇತರ |
| 2. | ಶ್ರೀಮತಿ ಜಗದೇವಿ ಹಿರೇಮಠ, ಶಿಕ್ಷಣ ಸಂಯೋಜಕರು (ಪ್ರೌಢ), ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಅಧೀಕ್ಷಕರು, ನಿವಾಸಿ ಆಯುಕ್ತರ ಕಛೇರಿ, ಕರ್ನಾಟಕ ಭವನ, ನವದೆಹಲಿ | ಬೋಧಕೇತರ |
| 3. | ಶ್ರೀ ಎಸ್.ಆರ್. ಉಮಾಶಂಕರಯ್ಯ, ಸಹ ಶಿಕ್ಷಕರು, ಸ.ಪ್ರೌ. ಶಾಲೆ, ಹುಳಗೇನಹಳ್ಳಿ, ಸಿರಾ ತಾಲ್ಲೂಕು, ಮಧುಗಿರಿ ಶೈಕ್ಷಣಿಕ ಜಿಲ್ಲೆ, ತುಮಕೂರು | ಆಪ್ತ ಸಹಾಯಕರು, ತುಮಕೂರು ಲೋಕಸಭಾ ಸದಸ್ಯರಾದ ಶ್ರೀ ಜಿ.ಎಸ್. ಬಸವರಾಜ | ಬೋಧಕೇತರ |
| 4. | ಶ್ರೀ ಶಂಶುದ್ದೀನ್ ಉಸ್ಮಾನ್ ಶೇಖ್, ಶಿಕ್ಷಣ ಸಂಯೋಜಕರು (ಉರ್ದು), ಉಪನಿರ್ದೇಶಕರು ಕಛೇರಿ, ಕಾರವಾರ, ಉತ್ತರ ಕನ್ನಡ ಜಿಲ್ಲೆ | ವಿಸ್ತರಣಾಧಿಕಾರಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಕಾರವಾರ | ಬೋಧಕೇತರ |
| 5. | ಶ್ರೀ ಮಂಜುನಾಥ ಎಂ.ಎಸ್, ಸಹ ಶಿಕ್ಷಕರು, ಸ.ಮಾ.ಪ್ರಾ.ಶಾಲೆ, ಶಿರಾಂಗಲ, ಸೋಮವಾರ ಪೇಟೆ ತಾಲ್ಲೂಕು | ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರ್ಯಕ್ರಮಾಧಿಕಾರಿಗಳು, ಮಡಿಕೇರಿ, ಕೊಡಗು ಜಿಲ್ಲೆ | ಬೋಧಕೇತರ |
| 6. | ಶ್ರೀ ವಿಠ್ಠಲ ಘಾಟೆ, ಸ.ಶಿ, ಸ.ಕಿ.ಪ್ರಾ.ಶಾಲೆ, ಗುರುಪಾದಪ್ಪಾ ತಾಂಡಾ ಔರಾದ, ತಾಲ್ಲೂಕು, ಬೀದರ್ ಜಿಲ್ಲೆ | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲ್ಲೂಕು ವಿಸ್ತರಣಾಧಿಕಾರಿಗಳ ಹುದ್ದೆಗೆ | ಬೋಧಕೇತರ |